**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ಚನ್ನಗಿರಿ, ನ್ಯಾಯಾಲಯದಲ್ಲಿ**
**ಸಿ.ಸಿ ನಂ: 545/2023**

| ಪಿರ್ಯಾದುದಾರರು | ವಿರುದ್ಧ | ಆರೋಪಿತರು : |
|---|---|---|
| ಚನ್ನಗಿರಿ ಪೊಲೀಸ್ ಠಾಣೆ. | | 1. ಮಂಜುನಾಥ<br>ಬಿನ್ ರಾಜಪ್ಪ<br>ವಯಸ್ಸು: 35 ವರ್ಷ,<br><br>2. ರಮೇಶ<br>ಬಿನ್ ಹಾಲಪ್ಪ<br>ವಯಸ್ಸು: 45 ವರ್ಷ ,<br>ಇಬ್ಬರ ವಾಸ: ಬುಸ್ಸೇನಹಳ್ಳಿ ಗ್ರಾಮ,<br>ಚನ್ನಗಿರಿ ತಾಲ್ಲೂಕು,<br>ದಾವಣಗೆರೆ ಜಿಲ್ಲೆ. |

**ದಂಡ ಪ್ರಕ್ರಿಯಾ ಸಂಹಿತೆ ಕಲಂ. 313 ರಡಿ ಆರೋಪಿ ಹೇಳಿಕೆ.**

ಪ್ರಶ್ನೆ.1 ಈ ಪ್ರಕರಣದಲ್ಲಿ ವಿಚಾರಣೆಯಾದ ಸಾಕ್ಷಿದಾರರ ಸಾಕ್ಷ್ಯಗಳನ್ನು ಕೇಳಿದ್ದೀರಾ? ತಿಳಿಯಿತೇ?

ಉತ್ತರ :

ಆ:1.

ಆ: 2.

ಪ್ರಶ್ನೆ.2 : ಫ್ರಾಸಾ. 10 ಶಶಿಧರ ಹೆಚ್ . ಎಂ ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ: 13.01.2021 ರಂದು ಠಾಣಾ ಮೊಕದ್ದಮೆ ನಂ. 8/2023 ಕಲಂ. 354 (ಬಿ) , 392 ಐ. ಪಿ. ಸಿ ರಡಿ ಮಾಲು ಮತ್ತು ಆರೋಪಿಯ ಪತ್ತೆ ಬಗ್ಗೆ ಚಾ.ಸಾ 13 ರರು ಅಪರಾಧ ವಿಭಾಗದಲ್ಲಿದ್ದ ತನ್ನನ್ನು ಮತ್ತು ಚಾ.ಸಾ 11 ರವರನ್ನು ನೇಮಿಸಿದ್ದು, ಅದರಂತೆ ತಾವು ಪ್ರಕರಣದ ಪತ್ತೆ ಕುರಿತು ಮುದ್ದೇನಹಳ್ಳಿ ಗ್ರಾಮಕ್ಕೆ ಹೋಗಿದ್ದು, ಪ್ರಕರಣದ ಪತ್ಯಕ್ಷ ದರ್ಶಿಗಳಾದ ಚಾ.ಸಾ 7 ಮತ್ತು 8 ರವರನ್ನು ಭೇಟಿ ಮಾಡಿ ವಿಚಾರಿಸಿದಾಗ ಸದರಿಯವರು ತಾವು ಆರೋಪಿತರನ್ನು ನೋಡಿರುವುದಾಗಿ ತಿಳಿಸಿದ್ದು, ಅದರಲ್ಲಿ ಒಬ್ಬ ವ್ಯಕ್ತಿ ತೆಳ್ಳಗೆ ಉದ್ದ ಇದ್ದು ತಲೆಯಲ್ಲಿ ಉದ್ದನೆಯ ಕೂದಲನ್ನು ಬಿಟ್ಟಿರುವುದಾಗಿ ತಿಳಿಸಿದ್ದರು, ಇನೊಬ್ಬ ವ್ಯಕ್ತಿ 45-50 ವರ್ಷ ವಯಸ್ಸಿನವರಾಗಿರುವುದಾಗಿ ತಿಳಿಸಿರುತ್ತಾರೆ. ನಂತರ ಮರು ದಿನ ದಿ: 14.01.2013 ರಂದು ಬೆಳಿಗ್ಗೆ 9.30 ಗಂಟೆಗೆ ಚನ್ನಗಿರಿ ನಗರದ ಕಗತೂರು ರಸ್ತೆಯಲ್ಲಿ ಗಸ್ತು ಕಾರ್ಯದಲ್ಲಿದ್ದಾಗ ಯಾರೋ ಇಬ್ಬರು ವ್ಯಕ್ತಿಗಳು ಬಸವೇಶ್ವರ ನಗರದಿಂದ ಮಣ್ಣಮ್ಮ ಶಾಲೆ ರಸ್ತೆಯಲ್ಲಿ ಬರುತ್ತಿದ್ದ ಸದರಿಯವರು ತಡೆದು ವಿಚಾರಿಸಿದಾಗ ಅವರ ಬಳಿ ಇದ್ದ ಒಂದು ಮೊಬೈಲ್ ಹಾಗೂ ಸರವನ್ನು ಮಾರಾಟ ಮಾಡಲು ಹೋಗುತ್ತಿರುವುದಾಗಿ ತಿಳಿಸಿರುತ್ತಾರೆ. ನಂತರ ನಾವು ಕೂಡಲೇ ಚಾ.ಸಾ 13 ರವರಿಗೆ ಮಾಹಿತಿಯನ್ನು ತಿಳಿಸಿದ್ದು, ಅವರು ಮುದ್ದೇನಹಳ್ಳಿಯಿಂದ ನಾವಿರುವ ಸ್ಥಳಕ್ಕೆ ಬಂದು ಸದರಿ ಆಸಾಮಿಗಳು

ವಿಚಾರಿಸಿದಾಗ ಅವರಲ್ಲಿ ಒಬ್ಬ ಮಂಜುನಾಥ ಬಿನ್ ರಾಜಪ್ಪ, 30 ವರ್ಷ, ಮುದ್ದೇನಹಳ್ಳಿ ಗ್ರಾಮ ಎಂದು ಮತ್ತು ಇನ್ನೊಬ್ಬ ರಮೇಶ ಬಿನ್ ಹಾಲಪ್ಪ ಮುದ್ದೇನಹಳ್ಳಿ ಗ್ರಾಮ ಎಂದು ತಿಳಿಸಿರುತ್ತಾರೆ. ಸದರಿಯವರು ದಿಃ 13.01.2023 ರಂದು ಮುದ್ದೇನಹಳ್ಳಿ ಗ್ರಾಮದ ಹತ್ತಿರ ತೋಟದಲ್ಲಿ ಒಬ್ಬ ಹೆಂಗಸಿನಿಂದ ಮೊಬೈಲ್ ಮತ್ತು ಸರವನ್ನು ಕಿತ್ತುಕೊಂಡು ಬಂದಿರುವುದಾಗಿ ತಿಳಿಸಿದ್ದು, ಕೂಡಲೇ ಚಾ.ಸಾ 13 ರವರು ಸದರಿಯವರ ಬಳಿ ಇದ್ದ ಮೊಬೈಲ್ ಮತ್ತು ಸರವನ್ನು ವಶಕ್ಕೆ ಪಡೆದು, ಪಂಚರಾದ ಚಾ.ಸಾ 5 ರವರ ಸಮಕ್ಷಮ ಠಾಣೆಗೆ ಕರೆದುಕೊಂಡು ಬಂದು ಠಾಣೆಯಲ್ಲಿ ಪಂಚನಾಮೆಯನ್ನು ಜರುಗಿಸಿರುತ್ತಾರೆ. ನಂತರ ಸದರಿ ಇಬ್ಬರು ಆಸಾಮಿಗಳ ಸ್ವ ಇಚ್ಛಾ ಹೇಳಿಕೆಯನ್ನು ಪಡೆದು ಪಂಚರ ಸಮಕ್ಷಮ ಆರೋಪಿತರನ್ನು ಕೃತ್ಯ ನಡೆದ ಸ್ಥಳಕ್ಕೆ ಇಲಾಖಾ ವಾಹನದಲ್ಲಿ ಕರೆದುಕೊಂಡು ಹೋಗಿರುತ್ತೇವೆ. ಸದರಿ ವಿಚಾರದ ಕುರಿತು ನಾನು ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಆಸಾಮಿಯ ವಶಕ್ಕೆ ಪಡೆಯಲಾಯಿತು ಎನ್ನಲಾದ ಮೊಬೈಲ್ ಮತ್ತು ಸರವನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಮೊಬೈಲ್ ಮತ್ತು ಸರವನ್ನು ಚಾ.ಸಾ 1 ರವರು ನ್ಯಾಯಾಲಯದ ಆದೇಶದ ಮೇರೆಗೆ ಮಧ್ಯಂತರ ಅಭಿರಕ್ಷೆಗೆ ಪಡೆದಿರುತ್ತಾರೆ ಎಂದು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ :

ಆಃ1.

ಆಃ 2.

ಪ್ರಶ್ನೆ.3 : ಫ್ರಾಸಾ.11 ಚಂದ್ರಶೇಖರ ಕೆ. ಎನ್ ರವರು ತಮ್ಮ ಸಾಕ್ಷ್ಯದಲ್ಲಿ ದಿಃ 13-01-2023 ರಂದು ರಾತ್ರಿ 8.30 ಗಂಟೆಗೆ ನಾನು ಠಾಣಾ ಪ್ರಭಾರೆಯಲ್ಲಿದ್ದಾಗ ಚಾಸಾ-1ರವರು ಠಾಣೆಗೆಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಕೊಂಡು ಠಾಣಾ ಮೊಕದ್ದಮೆ ನಂ 8/2023 ಪ್ರಕರಣ ದಾಖಲಿಸಿಕೊಂಡು ಪ್ರ ವ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿದ್ದು, ನಂತರ ಆರೋಪಿತರ ಪತ್ತೆಗಾಗಿ ಚಾಸಾ-10 ಮತ್ತು 11 ರವರನ್ನು ನೇಮಕಮಾಡಿರುತ್ತೇನೆ. ಆ ದಿನ ಅವೇಳೆಯಾದ್ದರಿಂದ ಘಟನಾ ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ. ದಿಃ 14-01-2023 ರಂದು ಬೆಳಿಗ್ಗೆ 9.00 ಗಂಟೆಗೆ ಚಾಸಾ-1ರವರು ತೋರಿಸಿದ ಘಟನಾ ಸ್ಥಳಕ್ಕೆ ಭೇಟಿ ನೀಡಿ ಚಾಸಾ-2 ಮತ್ತು 3 ರವರಿಗೆ ನೋಟಿಸನ್ನು ಜಾರಿ ಮಾಡಿ ಸದರಿಯವರನ್ನು ಸ್ಥಳಕ್ಕೆ ಬರಮಾಡಿಕೊಂಡು ಘಟನಾ ಸಂಬಂಧ ವಿವರ ನೀಡಿರುತ್ತೇನೆ. ಚಾಸಾ-1 ರಿಂದ 3 ರವರ ಸಮಕ್ಷಮ ಬೆಳಿಗ್ಗೆ 9.00 ರಿಂದ 10.00 ರವರೆಗೆ ಸ್ಥಳ ಪಂಚನಾಮೆಯನ್ನು ಜರುಗಿಸಿ ಸ್ಥಳದಲ್ಲಿ ಒಂದುಫೋಟೋವನ್ನು ತೆಗೆಸಿದ್ದು, ನಂತರ ಅದೇ ಸಮಯದಲ್ಲಿ ಚಾಸಾ-10ರವರು ಕರೆಮಾಡಿ ಚಾಸಾ-10 ಮತ್ತು 11 ರವರನ್ನು ಕರೆಮಾಡಿ ಇಬ್ಬರನ್ನು ಅನುಮಾನಸ್ಪದ ವ್ಯಕ್ತಿಗಳು ಬಸವೇಶ್ವರ ನಗರದ ಮಣ್ಣಮ್ಮ ಶಾಲೆಯ ಕ್ರಾಸ್ ಬಳಿ ಇರುವುದು

ಕಂಡುಬಂದಿದ್ದು ತಾವುಗಳು ಬರುವಂತೆ ಕೋರಿದ ಮೇರೆಗೆ ನಾನು ಸ್ಥಳಕ್ಕೆ ಹೋಗಿ ನೋಡಿದಾಗ ಇಬ್ಬರೂ ವ್ಯಕ್ತಿಗಳು ಕಂಡುಬಂದಿದ್ದು ಸದರಿಯವರ ಅಂಗಶೋಧನೆ ಮಾಡುವ ವಿಚಾರ ಸ್ಥಳೀಯರಾದ ಚಾಸಾ-4 ಮತ್ತು 5 ರವರನ್ನು ಬರಮಾಡಿಕೊಂಡು ಸದರಿಯವರಿಗೆ ಪ್ರಕರಣದ ಮಾಹಿತಿಯನ್ನು ನೀಡಿ ಪ್ರಕರಣದ ವಿಚಾರವಾಗಿ ಮಹಜರು ಕ್ರಮ ಜರುಗಿಸಲು ನೋಟಿಸನ್ನು ನೀಡಿರುತ್ತೇನೆ. ನಂತರ ಅದೇ ಸಮಯದಲ್ಲಿ ಪಂಚರಾದ ಚಾಸಾ-4 ಮತ್ತು 5 ರವರ ಸಮಕ್ಷಮ ಸದರಿ ವ್ಯಕ್ತಿಗಳನ್ನು ವಿಚಾರಿಸಲಾಗಿ ಸದರಿಯವರು ಮಂಜುನಾಥ ಬಿನ್ ರಾಜಪ್ಪ , ಬುಸ್ಸೇನಹಳ್ಳಿ , ಮತ್ತೊಬ್ಬರು ರಮೇಶ ಬಿನ್ ಹಾಲಪ್ಪ, ಬುಸ್ಸೇನಹಳ್ಳಿ ಎಂದು ತಿಳಿಸಿದರು. ಸದರಿ ಆರೋಪಿತರನ್ನು ಅಂಗಶೊಧನೆಗೆ ಒಳಪಡಿಸಿದಾಗ 1 ನೇ ಆರೋಪಿಯು ತನ್ನ ಬಳಿ ಇದ್ದ ಒಂದು ಸರ ಮತ್ತು ಮೊಬೈಲ್ ನ್ನು ಹಾಜರುಪಡಿಸಿದ್ದು, ಸರವು ಮುಡಿ ಕಟಿಂಗ್ ಮಾದರಿಯದ್ದಾಗಿದ್ದು, ಮೊಬೈಲ್ IQ00 ಮಾದರಿಯದ್ದಾಗಿತ್ತು. ನಂತರ ಸದರಿ ಸರ ಮತ್ತು ಮೊಬೈಲ್ ನ್ನು ಬೆಳಿಗ್ಗೆ 10.15 ರಿಂದ 10.50 ರವರೆಗೂ ಚಾಸಾ-4 ಮತ್ತು 5 ರವರ ಸಮಕ್ಷಮ ಮಹಜರು ಕ್ರಮ ಜರುಗಿಸಿ ಅಮಾನತುಪಡಿಸಿಕೊಂಡಿರುತ್ತೇನೆ. ಪಂಚನಾಮೆ ಕಾಲದಲ್ಲಿ ಪೊಟೋವನ್ನು ಸಹ ತೆಗೆಸಿರುತ್ತೇನೆ. ನಂತರ ವಶಪಡಿಸಿಕೊಂಡ ಮಾಲು ಮತ್ತು ಅರೋಪಿತರೊಂದಿಗೆ ಠಾಣೆಗೆ ಬಂದು ಅರೋಪಿತರಿಂದ ವಿವರವಾದ ಸ್ವ ಇಚ್ಚೆ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅದೇ ಸಮಯಕ್ಕೆ ಅಕ್ಕಸಾಲಿಗರದ ಚಾಸಾ-9 ರವರು ಸರವನ್ನು ಪರೀಕ್ಷಿಸಿ ಸದರಿ ಸರವು ರೋಲ್ಡ್ ಗೋಲ್ಡ್ ಸರವೆಂದು ತಿಳಿಸಿ ಮಹಜರಿಗೆ ಸಹಿ ಮಾಡಿರುತ್ತಾರೆ. ನಂತರ ಚಾಸಾ-1 ರವರು ಠಾಣೆಯಲ್ಲಿದ್ದಂತಹ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಚಾಸಾ-1 ರವರು ಸದರಿ ಅಮಾನತುಪಡಿಸಿಕೊಂಡಿದ್ದ ರೋಲ್ಡ್ ಗೋಲ್ಡ್ ಸರ ಮತ್ತು ಮೊಬೈಲ್ ತನ್ನದೇ ಎಂದು ಗುರುತಿಸಿದ್ದರಿಂದ ನಿಪಿ-4 ರಂತೆ ಮಹಜರು ಕ್ರಮ ಜರುಗಿಸಿ ವಶಪಡಿಸಿಕೊಂಡ ಮಾಲನ್ನು ಠಾಣಾ ಮಾಲುಪಟ್ಟಿ ಸಂ 6/2023 ರಂತೆ ನೊಂದಾಯಿಸಿ ನ್ಯಾಯಾಲಯಕ್ಕೆ ವರದಿ ಮಡಿಕೊಂಡಿರುತ್ತೇನೆ. ನಿಪಿ-4 ರ ಮಹಜರು ವೇಳೆಯಲ್ಲಿ ನಿಪಿ-5 ಮತ್ತು 6 ರಂತೆ ಪೊಟೋಗಳನ್ನು ತೆಗೆಸಿರುತ್ತೇನೆ. ನಂತರ ಅರೋಪಿತರ ವಿರುದ್ಧ ದಸ್ತಗಿರಿ ಕ್ರಮ ಜರುಗಿಸಲಾಯಿತು ಎಂದು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ :

ಆಃ1.

ಆಃ 2.

ಪ್ರಶ್ನೆ.4 ಫ್ರಾ.ಸಾ 11 ರವರು ಮುಂದುವರೆದು 1 ನೇ ಆರೋಪಿ ಮಂಜುನಾಥನು ತನ್ನ ಸ್ವ ಇಚ್ಛಾ ಹೇಳಿಕೆಯಲ್ಲಿ ತಾನು ತನ್ನನ್ನು ಕರೆದುಕೊಂಡು ಹೋದರೆ ದಿಃ 13-01-2023 ರಂದು ಚಾಸಾ-1 ರವರನ್ನು ಹೆದರಿಸಲು ಬಳಸಿದ ಕುಡುಗೋಲನ್ನು ಅದೇ ತೋಟದಲ್ಲಿ

ಬಿಸಾಡಿದ್ದು, ತಾವು ಕರೆದುಕೊಂಡು ಹೋದರೆ ನಾನು ತೋರಿಸುವುದಾಗಿ ಹೇಳಿದ ಮೇರೆಗೆ ಪಂಚರಾದ ಚಾಸಾ-4 ಮತ್ತು 5 ರವರನ್ನು ಹಾಗೂ ಸಿಬ್ಬಂದಿಗಳಾದ ಚಾಸಾ-11 ಮತ್ತು ಇತರರನ್ನು ಕರೆದುಕೊಂಡು ಠಾಣೆಯಿಂದ ಮಧ್ಯಾಹ್ನ 1.00 ಗಂಟೆಗೆ ಮುದ್ದೇನಹಳಿ ಗ್ರಾಮಕ್ಕೆ ಹೋಗಿದ್ದು 1 ನೇ ಆರೋಪಿಯು ಜೀಪನ್ನು ನಿಲ್ಲಿಸುವಂತೆ ಹೇಳಿ ಒಂದುಅಡಿಕೆ ತೋಟಕ್ಕೆ ಕರೆದುಕೊಂಡು ಹೋಗಿ ಚಾಸಾ-1 ರವರಿಗೆ ಸೇರಿದ ತೆಂಗಿನ ಮರದ ಪಕ್ಕದಲ್ಲಿ ಬಿಸಾಡಿದ್ದ ಕುಡುಗೋಲನ್ನು ತೋರಿಸಿದ ಮೇರೆಗೆ ಅದನ್ನು ಚಾಸಾ-4 ಮತ್ತು 5 ರವರ ಸಮಕ್ಷಮ ನಿಪಿ-11 ರಂತೆ ಮಹಜರು ಕ್ರಮ ಜರಗಿಸಿ ಅಮಾನತುಪಡಿಸಿಕೊಂಡಿರುತ್ತೇನೆ. ಆರೋಪಿಯ ಸ್ವಇಚ್ಚ ಹೇಳಿಕೆಯಾದ " ನಾನು ಸರವನ್ನು -------------------------- ತೋರಿಸುತ್ತೇನೆ " ಎಂಬ ಹೇಳಿಕೆಯನ್ನು ನಿಪಿ-19 ಎಂದು, ಸಾಕ್ಷಿಯ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು. ಮಹಜರು ವೇಳೆಯಲ್ಲಿ ನಿಪಿ-12 ರಂತೆ ಒಂದು ಪೋಟೋವನ್ನು ತೆಗೆಸಿರುತ್ತೇನೆ. ನಂತರ ಠಾಣೆಗೆ ಬಂದು ಅಮಾನತುಪಡಿಸಿಕೊಂಡ ಕುಡುಗೋಲನ್ನು ಠಾಣಾ ಮಾಲು ಪಟ್ಟಿ ಸಂ 7/2023 ರಲ್ಲಿ ನೊಂದಾಯಿಸಿ ನ್ಯಾಯಾಲಯಕ್ಕೆ ವರದಿ ಮಾಡಿಕೊಂಡಿದ್ದು, ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಕುಡುಗೋಲನ್ನು ನೋಡಿ ಗುರುತಿಸಿದ್ದು, ಆರೋಪಿತರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಸಿಬ್ಬಂದಿಯವರ ಬೆಂಗಾವಲಿನಲ್ಲಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿ ಹಾಗೂ ವಿ ಸಿ ಮುಖಾಂತರ ಹಾಜರಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ನಂತರ ಚಾಸಾ-10 ಮತ್ತು 11 ರವರ ಹೇಳಿಕೆಗಳನ್ನು ಪಡೆದುಕೊಂಡು ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-14 ರವರಿಗೆ ವರ್ಗಾಯಿಸಿರುತ್ತೇನೆ ಎಂದು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ :

ಆಃ1.

ಆಃ 2.

ಪ್ರಶ್ನೆ.5 : ಫ್ರಾಸಾ.12 ಮಧು ಪಿ. ಬಿ ರವರು ತಮ್ಮ ಸಾಕ್ಷ್ಯದಲ್ಲಿ ನಾನು ಈ ಪ್ರಕರಣದ ಕಡತವನ್ನು ಚಾಸಾ-13 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರೆಸಿ ನ್ಯಾಯಾಲಯದ ಆದೇಶದಂತೆ ಚಾಸಾ-2 ಮತ್ತು 6 ರವರಿಗೆ ನೋಟಿಸನ್ನು ಜಾರಿ ಮಾಡಿ ಸದರಿಯವರ ಸಮಕ್ಷಮ ನಿಪಿ-7 ರಂತೆ ಮೊಬೈಲ್ ನ್ನು ಚಾಸಾ-1 ರವರ ವಶಕ್ಕೆ ನೀಡಿ ಬೆಳಿಗ್ಗೆ 11.00 ರಿಂದ 11.30 ರವರೆಗೂ ಮಹಜರು ಕ್ರಮವನ್ನು ಜರುಗಿಸಿರುತ್ತೇನೆ. ನಂತರ ದಿಃ 14-03-2023 ರಂದು ಚಾಸಾ-7 ರಿಂದ 9 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಯು ಚಾಸಾ-9 ರವರ ಹೇಳಿಕೆಯ ಪ್ರತಿಯನ್ನು ನೋಡಿ

ಗುರುತಿಸಿದ್ದು ಚಾಸಾ-1ರವರಿಗೆ ಸಂಬಂಧಿಸಿದ ಕೃತ್ಯ ಸ್ಥಳದ ಸರ್ವೆ ನಂ 18/1ರ ಪಹಣಿಪ್ರತಿಯನ್ನುಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯ ಪಹಣಿ ಪ್ರತಿ ಮತ್ತು ಅದರಲಿಲರು ತನ್ನಸಹಿಯನ್ನು ನೋಡಿ ಗುರುತಿಸಿದ್ದು, ಚಾಸಾ-12 ರವರು ದಿಃ 14-03-2023 ರಂದು ಚಾಸಾ-1ರವರ ಕೃತ್ಯ ನಡೆದ ಸ್ಥಳದಲ್ಲಿ ನಿಪಿ-2 ರಂತೆ ಸ್ಥಳ ಪಂಚನಾಮೆ ಜರುಗಿಸುವ ಸಮಯದಲ್ಲಿ ಪೋಟೋ ತೆಗೆದ ಬಗ್ಗೆ ಕಲಂ 65ಬಿ ರಡಿ ನೀಡಿರುವ ಪ್ರ ಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ದಿಃ 30-03-2023 ರಂದು ಆರೋಪಿತರ ವಿರುದ್ಧ ಆರೋಪಿಯು ಸಾಬೀತಾದ್ದರಿಂದ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ :

ಆಃ1.

ಆಃ 2.

ಪ್ರಶ್ನೆ. 6 : ನಿಮ್ಮ ಪರವಾಗಿ ಸಾಕ್ಷಿಗಳು ಇವೆಯೆ? ಸಾಕ್ಷಿಗಳು ಇದ್ದರೆ ಹೆಸರು ಹಾಗೂ ವಿಳಾಸ ತಿಳಿಸಿ?

ಉತ್ತರ

ಆಃ1.

ಆಃ 2.

ಪ್ರಶ್ನೆ.10 : ನೀವು ಹೆಚ್ಚಿಗೇನಾದರೂ ಹೇಳಲು ಇಚ್ಛಿಸುವಿರಾ?

ಉತ್ತರ

ಆಃ1.

ಆಃ 2.

(ಆರೋಪಿಯ ಹೇಳಿಕೆಗಳನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಕೇಳಿ ಆತ ಕೊಟ್ಟ ಉತ್ತರಗಳನ್ನು ಆತ ಕೊಟ್ಟಂತೆ ಬರೆದುಕೊಳ್ಳಲಾಗಿರುತ್ತದೆ ಅಂತಾ ಈ ಮೂಲಕ ದೃಡೀಕರಿಸುತ್ತೇನೆ.)

ದಿನಾಂಕ: 24.06.2026 Sd/-

ಸಿ/ಸಿ **1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ನ್ಯಾಯಾಲಯ, ಚನ್ನಗಿರಿ.**

**ಆರೋಪಿ ಸಹಿ :-**

1.

2.